ವಾದ್ಯವೊಂದನ್ನು ಊದಲಾಗುತ್ತಿತ್ತು. ಜನ ಭಕ್ತಿಯಿಂದ, ಆದರೆ ವಿಶೇಷ ಕುತೂಹಲವೇನೂ ಇಲ್ಲದೆ ನಿಂತಿದ್ದರು. ನಿಂತ ಜನರನ್ನು ನೋಡಿದರೆ, ಗೋಪಾಲನ್ ಅವರು ಹೇಳಿದಂತೆ, ಕೆಳ ಮತ್ತು ಕೆಳಮಧ್ಯಮವರ್ಗದ ಹಳ್ಳಿಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಒಂದು ತುದಿಗೆ ಮಾತ್ರ ಒಬ್ಬನೇ ಒಬ್ಬ ವಿದೇಶೀಯ ಉದ್ದ ಕೊಳವೆಯ ಕ್ಯಾಮೆರಾದಲ್ಲಿ ಫೋಟೊ ತೆಗೆದುಕೊಳ್ಳುತ್ತಿದ್ದ. ಈಗ ನೆನಪು ಮಾಡಿಕೊಳ್ಳುತ್ತೇನೆ – ಇವತ್ತಾಗಿದ್ದರೆ, ಅಲ್ಲಿರುವ ನೂರಕ್ಕೆ ತೊಂಬತ್ತು ಜನ ತಮ್ಮ ಮೊಬೈಲುಗಳಲ್ಲಿ ಅದನ್ನು ಸೆರೆ ಹಿಡಿಯುತ್ತ ನಿಂತಿರುತ್ತಿದ್ದರು; ಅಂದು ನಾವು ನೋಡಿದ ಆ ಆಚರಣೆಯಲ್ಲಿ ನಮಗೆ ಕಂಡಿದ್ದು ಒಂದೇ ಒಂದು ಕ್ಯಾಮೆರಾ; ಅದರ ಒಡೆಯನೂ ಕೂಡಾ ಕೆಲವು ಸಮಯದ ಬಳಿಕ ನಾಪತ್ತೆಯಾದ. ಇದ್ದ ಜನರಿಗೆ ದೆಯ್ಯಗಳನ್ನು ನೋಡುವುದು ಮತ್ತು ತಮ್ಮೊಳಗೇ ಮಾತಾಡಿಕೊಳ್ಳುವುದು ಬಿಟ್ಟರೆ, ಬೇರಾವ ವಿಕರ್ಷಣೆಯೂ ಅಲ್ಲಿರಲಿಲ್ಲ.

ಹತ್ತಾರು ನಿಮಿಷ ನೋಡಿದ ಬಳಿಕ ನಮ್ಮ ಹಿಂದಿ ಗೆಳೆಯ ಪಿಸುಗುಟ್ಟಿದ – 'ಇಷ್ಟೇನಾ? ಇದೊಳ್ಳೆ ಆಂಟಿಕ್ಲೈಮ್ಯಾಕ್ಸ್ ಆಯಿತಲ್ಲ?!' ಮತ್ತೊಬ್ಬ ಅವನಿಗೆ ಉತ್ತರಿಸಿದ – 'ಗೋಪಾಲನ್ ಹೇಳಿದ್ದರಲ್ಲವಾ? ಮೊದಲಿಗೆ ಬರುವುದು ಸಾದಾ ವೇಷಗಳು; ಆಮೇಲೆ ಅವರೇ ಭರ್ಜರಿಯಾದ ಬೇರೆ ವೇಷ ತೊಟ್ಟು ಮರಳಿ ಬರುತ್ತಾರೆ ಅಂತ?' ನೋಡೋಣವೆಂದು ಇನ್ನೂ ಹತ್ತಾರು ನಿಮಿಷ ನಿಂತರೂ ಅದೇ ದೆಯ್ಯವೇ ಸುತ್ತಾಡುತ್ತ ಇದ್ದುದರಿಂದ, ನಾವು ಗುಡಿಯ ಸುತ್ತ ಓಡಾಡೋಣವೆಂದು ಹೋದೆವು. ಹಲವರು ಅಂಗಿ ಬಿಚ್ಚಿದ್ದರು; ಹೇಗೂ ಸೆಕೆ ಇದ್ದುದರಿಂದ ನಾವೂ ಹಾಯಾಗಿ ಅಂಗಿ ಬಿಚ್ಚಿ ಒಳಹೊಕ್ಕೆವು. ದೇವಸ್ಥಾನ ತುಂಬ ಮಾಮೂಲಾಗಿತ್ತು; ಆದರೆ, ಅದರ ಪಕ್ಕದಿಂದ ಹಾಡಿಯೊಂದನ್ನು ಹೊಕ್ಕ ನಮಗೆ ಅದ್ಭುತಾಶ್ಚರ್ಯಗಳು ಕಾದಿದ್ದವು. ಆ ಹಾಡಿಯ ಬೇರೆಬೇರೆ ಜಾಗಗಳಲ್ಲಿ ನಾಲ್ಕಾರು ಬೇರೆಬೇರೆ ಪ್ರಮಾಣದ ದೆಯ್ಯಗಳ ವೇಷಧಾರಣೆ ಮತ್ತು ಪ್ರಸಾಧನದ ಸಿದ್ಧತೆ ನಡೆಯುತ್ತಿತ್ತು. ಗೋಪಾಲನ್ ಹೇಳಿದ ಹಾಗೆ, ನಿಜವಾಗಿ ದೆಯ್ಯಗಳ ಒಂದು ಭಾರೀ ವಸ್ತುಸಂಗ್ರಹಾಲಯ – ಅದೇನು ರೇಖೆಗಳು... ಅದೆಂಥ ಹೊಳೆವ ಬಣ್ಣಗಳು... ಬಾಳೆ ಮರದ ದಿಂಡು, ಬಿದಿರಿನ ಸಿಬಿರು ಮತ್ತು ಬಟ್ಟೆ – ಇಷ್ಟೇ ಸಾದಾ ವಸ್ತುಗಳನ್ನು ಬಳಸಿ ಮಾಡಿದ ಅದೆಂಥ ಅಲೌಕಿಕ ವೇಷಭೂಷಣಗಳು...

ನಾನಾ ರೂಪದ ದೆಯ್ಯಗಳನ್ನೂ ದೇವರುಗಳನ್ನೂ ಸೃಷ್ಟಿಸುವುದಕ್ಕೆ ಬೇಕಾಗಿರುವುದು ದುಬಾರಿ ವಸ್ತುಗಳಲ್ಲ, ಯಥೇಚ್ಛ ಕಾಲ್ಪನಿಕತೆ ಮಾತ್ರ – ಎಂದು ನಾನಂದುಕೊಂಡೆ. ನಮ್ಮ ಯಾರ ಬಳಿಯೂ ಕ್ಯಾಮೆರಾ ಇರಲಿಲ್ಲವಾಗಿ, ನಾವು ಸಮೀಪಕ್ಕೆ ಹೋಗಿನಿಂತು ವಿವರಗಳನ್ನು ಕಣ್ತುಂಬಿಕೊಳ್ಳತೊಡಗಿದೆವು. ಚಿತ್ರಕಾರನೂ ಆಗಿದ್ದ ನನ್ನ ಸಹಪಾಠಿಯೊಬ್ಬ ಅದರ ರೇಖೆಗಳನ್ನು ತನ್ನ ನೋಟ್ ಬುಕ್ಕಿನಲ್ಲಿ ಮೂಡಿಸಿಕೊಂಡ. ನಾವು ಒಂದಾದಮೇಲೊಂದರಂತೆ – ಸಿದ್ಧತೆಯ ಹಲವು ಅವಸ್ಥೆಗಳಲ್ಲಿದ್ದ ದೆಯ್ಯಗಳನ್ನು ನೋಡುತ್ತ ಸಾಗಿದೆವು. ಒಂದು ಮೂಲೆಯಲ್ಲಿ ಒಬ್ಬ ಪಾತ್ರಿಯ ಮೇಲೆ ತುಂಬ ಚಿತ್ತಾರಗಳಿರುವ ಒಂದು ಪ್ರಸಾಧನದ ಹೊರರೇಖೆಗಳನ್ನು ಮಾತ್ರ ಬರೆದು ಬಿಟ್ಟುಹೋಗಿದ್ದರು; ಮುಂದೆ ಕೆಲವೇ ತಾಸುಗಳಲ್ಲಿ ದೆಯ್ಯವಾಗಿ ಧರೆಗಿಳಿಯುವ ಆ ಮಹಾನುಭಾವ ಅಂಥ ಅರೆ–ಪ್ರಸಾಧನದ ಅವಸ್ಥೆಯಲ್ಲೇ ಸ್ವಸ್ಥನಾಗಿ ನಿದ್ರೆಹೋಗಿದ್ದ!

ನಾನು ಬಹಳ ಹೊತ್ತು ಅವನನ್ನೇ ನೋಡುತ್ತ ನಿಂತೆ. ಚಿಕ್ಕದಾದ ಲುಂಗಿಯೊಂದನ್ನು ಬಿಟ್ಟು ಬೇರಾವ ಬಟ್ಟೆಯೂ ಅವನ ಮೈಮೇಲೆ ಇರಲಿಲ್ಲ; ಮರಗಳ ನಡುವಿನ ಆ ಮಂದ ಬೆಳಕಲ್ಲಿ ಆದಿಮಾನವನೊಬ್ಬ ಶಿಲಾಯುಗದಿಂದ ಬಂದು ಮಲಗಿದ್ದಾನೋ ಎನ್ನಿಸುವಂತಿತ್ತು. ಗೋಪಾಲನ್ ಬೇರೆ ಹೇಳಿದ್ದರಲ್ಲ – ಹಳೆ ಶಿಲಾಯುಗದ ತುದಿಯಲ್ಲೇ ಈ ತೆಯ್ಯಮ್ ಆಚರಣೆಯ ಪ್ರಾರಂಭದ ಅವಸ್ಥೆ ಕಾಣಲಿಕ್ಕೆ ಸಿಗುತ್ತದೆಯೆಂದು ಯಾವುದೋ ಸಂಶೋಧಕರು ಹೇಳಿದ್ದಾರಂತಲ್ಲ? ನಾನು ನೋಡನೋಡುತ್ತಿದ್ದಂತೆ, ಆ ಮನುಷ್ಯ ಸಣ್ಣಗೆ ಗೊರಕೆ ಹೊಡೆಯಲು ಆರಂಭಿಸಿದ. ಆ ಗೊರಕೆಯ